ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ57/23109/2021-22

ದಿನಾಂಕ : 11 MAR 2022

## ಸುತ್ತೋಲೆ

ವಿಷಯ: ಇತರೆ ಇಲಾಖೆಗಳಿಂದ ಸಹಾಯಕ ಇಂಜಿನಿಯರ್(ಸಿವಿಲ್) ರವರುಗಳ ಸೇವೆಯನ್ನು ನಿಯೋಜನೆ ಮೇಲೆ ಪಡೆಯುವ ಬಗ್ಗೆ.

****

ನಿಗಮದಲ್ಲಿ ಪ್ರಸ್ತುತ ವಿವಿಧ ಕಾಮಗಾರಿಗಳು ಚಾಲ್ತಿಯಲ್ಲಿದ್ದು, ಅಧಿಕಾರಿಗಳ ಕೊರತೆಯಿಂದಾಗಿ ಕೆಲಸದ ಒತ್ತಡ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ, ವಿವಿಧ ಹಂತದ ಕೆಲಸಗಳ ನಿರ್ವಹಣೆಗಾಗಿ ಸಹಾಯಕ ಇಂಜಿನಿಯರ್(ಸಿವಿಲ್) ರವರುಗಳ ಸೇವೆಯು ಅವಶ್ಯಕವಾಗಿರುತ್ತದೆ. ಸಹಾಯಕ ಇಂಜಿನಿಯರ್(ಸಿವಿಲ್) ರವರುಗಳ ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುವುದರಿಂದ, ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆವಿಗೂ ಅಥವಾ ಒಂದು ವರ್ಷದ ಅವಧಿಗೆ ಕವಿಪ್ರನಿನಿಯ ರಾಜ್ಯವಾರು ವ್ಯಾಪ್ತಿಯಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್(ಸಿವಿಲ್) ಹುದ್ದೆಗಳಿಗೆ ಇತರೆ ಇಲಾಖೆಗಳಿಂದ ಅಧಿಕಾರಿಗಳನ್ನು ನಿಯೋಜನೆ ಮೇಲೆ ಪಡೆಯಲು ಅನುಮೋದಿಸಲಾಗಿರುತ್ತದೆ.

ಆದ್ದರಿಂದ, ಕವಿಪ್ರನಿನಿಯ ರಾಜ್ಯವಾರು ವ್ಯಾಪ್ತಿಯಲ್ಲಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಸಹಾಯಕ ಇಂಜಿನಿಯರ್(ಸಿವಿಲ್) ರವರು ಈ ಸುತ್ತೋಲೆಯ ದಿನಾಂಕದಿಂದ **15 ದಿನಗಳ ಒಳಗಾಗಿ** ತಮ್ಮ ಇಚ್ಛಿತಾ ಪತ್ರವನ್ನು, ಸೇವಾ ವಿವರ, ವಿದ್ಯಾರ್ಹತೆ ಹಾಗೂ ತಮ್ಮ ಇಲಾಖೆಯ ನಿಯೋಜನಾ ಷರತ್ತು ಮತ್ತು ನಿಬಂಧನೆಗಳೊಂದಿಗೆ ಸಮುಚಿತ ಮಾರ್ಗದ ಮುಖೇನ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಸರಬರಾಜು ಕಂಪನಿಗಳು/ಪಿಸಿಕೆಎಲ್
2. ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುತ್), ಕವಿಪ್ರನಿನಿ/ ವಿದ್ಯುತ್ ಸರಬರಾಜು ಕಂಪನಿಗಳು
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿದ್ಯುತ್), ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು
5. ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ kptcl.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.